**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**Crl Mis 79/2024**

| | | |
|---|---|---|
| ಸಾಕ್ಷಿಯ ಹೆಸರುಃ | ರೋಜಾ ಉರುಫ್ ರೋಹಿಣಿ | ಪ್ರಾಸಾಃಃ 1 |
| ಗಂಡನ ಹೆಸರುಃ | ವೀರಭದ್ರಸ್ವಾಮಿ | |
| ವಯಸ್ಸುಃ | 27 ವರ್ಷ | ಪ್ರಮಾಣೀಕರಿಸಿದ<br>ದಿಃ 10/11/2025 |
| ಉದ್ಯೋಗಃ | ಗೃಹಿಣಿ | |
| ವಾಸ ಸ್ಥಳಃ | ತಂದೆಯ ಮನೆ ಕೊಣಸೂರು | |

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ವಕೀಲರಿಂದಃ

ದಿಃ 13.02.2019 ರಂದು ನನ್ನ ಮದುವೆ 1 ನೇ ಎದುರುದಾರರೊಂದಿಗೆ ಹೊಳೆ ನರಸೀಪುರದ ಕೇರಳಾಪುರದ ವೀರ ಭದ್ರೇಶ್ವರ ಭವನದಲ್ಲಿ ನಡೆದಿರುತ್ತದೆ. ಮದುವೆ ಸಮಯದಲ್ಲಿ 1 ನೇ ಎದುರುದಾರರಿಗೆ ಬಟ್ಟೆ ಖರೀದಿಸಲು ರೂ.10,000/- ನಗದು ಹಣ ಮತ್ತು ಕೈ ಗಡಿಯಾರ ನೀಡಿದ್ದೆವು. ನನ್ನ ತಂದೆ ನನಗೆ 3 ಗ್ರಾಂ ನ 1 ಉಂಗುರ, 5 ಗ್ರಾಂ ನ ಒಂದು ಉಂಗುರ, 5 ಗ್ರಾಂ ನ ಒಂದು ಜೊತೆ ಓಲೆ ಮತ್ತು 3 ಗ್ರಾಂ ನ ಒಂದು ಜೊತೆ ಓಲೆ ಮತ್ತು 1 ಗ್ರಾಂನ ತಾಳಿ ನೀಡಿದ್ದರು. ಮದುವೆಗೆಂದು ರೂ. 3,00,000/- ಖರ್ಚು ಮಾಡಿದ್ದರು. ಮದುವೆಯ ನಂತರ ಬಡತ್ ಕ್ಯಾತನಹಳ್ಳಿಯಲ್ಲಿ ಎದುರುದಾರರೊಂದಿಗೆ ವಾಸಿಸುತ್ತಿದ್ದೆ. ಆ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಅತ್ತೆ ಮಾವ ಇದ್ದೆವು. ನಾವು ಮದುವೆ ನಂತರ 6 ತಿಂಗಳು ಚೆನ್ನಾಗಿದ್ದೆವು. 6 ತಿಂಗಳ ನಂತರ ನನಗೆ ಇನ್ನೂ ಮಕ್ಕಳಾಗಿಲ್ಲ ಎಂದು ಕುಡಿದು ಬಂದು ಸಣ್ಣ ಪುಟ್ಟ ಜಗಳ ಮಾಡಿ ಹೊಡೆದು ಬಡಿ ಮಾಡುತ್ತಿದ್ದರು. ನನ್ನನ್ನು ತುಂಬಾ ಅನುಮಾನಿಸುತ್ತಿದ್ದರು. ನನ್ನ ಗಂಡ ಕೆಲಸಕ್ಕೆ ಹೋಗುತ್ತೇನೆಂದು ತಿಳಿಸಿ ಬಾಗಿಲ ಸಂದಿ, ಕಿಟಕಿ ಸಂದಿ ನಿಂತು ಅನುಮಾನದಿಂದ

ನೋಡುತ್ತಿದ್ದರು. ನನ್ನ ಅತ್ತೆ, ಮಾವ ನನ್ನ ಗಂಡ ನೀಡುತ್ತಿದ್ದ ಕಿರುಕುಳದ ಬಗ್ಗೆ ವಿಚಾರಿಸುತ್ತಿರಲಿಲ್ಲ. ನಂತರ ನಾನು ಆಸ್ಪತ್ರೆಯಲ್ಲಿ ತೋರಿಸಿಕೊಂಡ ನಂತರ ಗರ್ಬಿಣಿ ಆದೆ. ನಾನು ಗರ್ಬಿಣಿ ಅದ ನಂತರವೂ ನನಗೆ ಕಿರುಕುಳ ನೀಡುತ್ತಿದ್ದರು. ನನ್ನನ್ನು ಆಸ್ಪತ್ರೆಗೆ ಸರಿಯಾಗಿ ತೋರಿಸುತ್ತಿರಲಿಲ್ಲ. ನಾನ ಬಳೆ ತೊಟ್ಟರೆ ಕಾಲಲ್ಲಿ ಹೊಡೆದು ಹಾಕಿ ಚುಚ್ಚುತ್ತಿದ್ದರು. ನಾನು 7 ತಿಂಗಳ ಗರ್ಬಿಣಿ ಇದ್ದಾಗ ನನ್ನ ತಂದೆಯ ಮನೆಗೆ ಕಳುಹಿಸಿಕೊಟ್ಟರು. ಆಗಲೂ ಸಹ ನನ್ನ ತಂದೆಯವರೇ ಸೀಮಂತದ ಖರ್ಚು ನೋಡಿಕೊಂಡರು. ಸೀಮಂತದಲ್ಲಿ ಬಂದ ಬಹುಮಾನವನ್ನು ಎದುರುದಾರನಿಗೆ ನೀಡಿದ್ದೆ. ತಂದೆಯ ಮನೆಗೆ ಬಂದ ನಂತರವೂ ನನಗೆ ಫೋನ್ ಮಾಡಿ 1 ನೇ ಎದುರುದಾರರು ನೀನು ಎಲ್ಲಿದ್ದೀಯಾ, ಯಾರ ಒಟ್ಟಿಗೆ ಇದ್ದೀಯಾ ಎಂದು ಕೇಳುತ್ತಿದ್ದರು. ದಿಃ 22.07.2022 ರಂದು ನನಗೆ ಗಂಡು ಮಗು ಆಯಿತು. ಮಗುವಾದಾಗ 3-4 ದಿನ ನನಗೆ ಪ್ರಜ್ಞೆ ಇರಲಿಲ್ಲ. ವೈದ್ಯರು ನಾನು ಗರ್ಬಿಣಿ ಇದ್ದಾಗ ಏನು ಮಾಡಿಕೊಂಡಿದ್ದೇನೆ, ಆಕೆಯನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ತಿಳಿಸಿದ್ದರು. ನನ್ನ ಗಂಡ ಮಗುವನ್ನು ನೋಡಲು ಬಂದಾಗ ಕುಡಿದು ಬಂದಿದ್ದರು. ಮಗುವನ್ನು ಮುತ್ತಿಕ್ಕಿದ್ದರಿಂದ ಮಗುವಿಗೆ ಗಾಯಗಳಾಗಿ ವೈದ್ಯರು ಈ ರೀತಿ ಮಾಡಬೇಡಿ ಎಂದು ತಿಳಿಸಿದ್ದರು. 1 ನೇ ಎದುರುದಾರರು ದುಡ್ಡು ಕೊಡಿಸು ಎಂದು ತಿಳಿಸಿದರು. ಅದಕ್ಕೆ ನಾನು ವಿಮಲ ಎಂಬುವವರಿಂದ ರೂ.20 ಸಾವಿರ ಕೊಡಿಸಿದ್ದೆ. ಅದು ಬಡ್ಡಿ ಸೇರಿ ರೂ. 50 ಸಾವಿರ ಆಗಿದೆ. ಅದನ್ನು ಇನ್ನೂ ಹಿಂದುರುಗಿಸಿಲ್ಲ. ಅದಲ್ಲದೇ ನಾನು ರೂ.25,000/-ಚೀಟಿ ಹಣವನ್ನು 1 ನೇ ಎದುರುದಾರರಿಗೆ ಕೊಡಿಸಿದ್ದೆ. ಆದರೆ ಅದನ್ನು ತೀರಿಸದ ಕಾರಣ ನನ್ನ ತಂದೆಯೇ ಅದನ್ನು ಸಹ ತೀರಿಸಿದ್ದಾರೆ. ನನ್ನ ಅತ್ತೆ ನಾನು ಅವರ ಮನೆಗೆ ಹೋಗುತ್ತಿಲ್ಲ ಎಂದು ಪಿರಿಯಾಪಟ್ಟಣ ಮಹಿಳಾ ಸಾಂತ್ವನ ಕೇಂದ್ರಕ್ಕೆ ದೂರು ನೀಡಿದ್ದರು. ಸದರಿ ದೂರಿನ ಮೇರೆಗೆ ರಾಜೀ ಸಂಧಾನ ಮಾಡಿಸಿದರು. ನಾನು ಹೋಗಲು ಒಪ್ಪಿಕೊಂಡರು. ನನ್ನ ಮನೆಯವರು ನನಗೆ ಏನಾದರೂ ಆದರೆ ಎದುರುದಾರರೇ ಕಾರಣ ಎಂದು ತಿಳಿಸಿ ಸಹಿ ಮಾಡಿದ್ದರು. ಆದರೆ ಎದುರುದಾರರೆಲ್ಲರೂ ಸಹಿ ಮಾಡಲಿಲ್ಲ. ಅವರು ಸಹಿ ಮಾಡದ

ಕಾರಣ ನಾನು ಹೋಗಲಿಲ್ಲ. ಪುನಃ ನಾನು ಹೋಗಲು ಒಪ್ಪಿರುತ್ತೇನೆ. ನಾನು ಅವರ ಮನೆಗೆ ಹೋಗುವ ದಿನಾಂಕದ ಹಿಂದಿನ ದಿನ 1 ನೇ ಎದುರುದಾರರು ನನ್ನ ತಾಯಿಯ ಮನೆಗೆ ಬಂದು ನನ್ನ ಕತ್ತನ್ನು ಹಿಸುಕಿ ಜಗಳ ಮಾಡಿ ಮಗುವನ್ನು ಕಿತ್ತುಕೊಂಡು ಹೋದರು. ಆಗ ಊರಿನವರು ಬೈದು ಮಗುವನ್ನು ವಾಪಸ್ಸು ಕೊಡಿಸಿದರು. ಇದಾದ ನಂತರ ನಾನು ಬೆಟ್ಟದಪುರ ಪೋಲೀಸ್ ಠಾಣೆಗೆ ದೂರು ಸಲ್ಲಿಸಿದೆ, ಆದರೆ ಯಾವುದೇ ಕ್ರಮ ತೆಗೆದು ಕೊಳ್ಳಲಿಲ್ಲ. ಒಟ್ಟು 3-4 ಬಾರಿ ದೂರು ಸಲ್ಲಿಸಿದ್ದೆ. ಗ್ರಾಮದಲ್ಲೂ ಸಹ ನ್ಯಾಯ ಪಂಚಾಯಿತಿ ಮಾಡಿದಾಗ ಒಪ್ಪಿ ನಂತರ ಪುನಃ ಅದೇ ರೀತಿ ನಡೆದುಕೊಳ್ಳುತ್ತಿದ್ದರು. ಅದಕ್ಕೆ ನಾನು ನನ್ನ ಗಂಡನೊಂದಿಗೆ ಹೋಗಲಿಲ್ಲ, ಆಗ ನನ್ನ ಗಂಡ ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಪೊಟೋ ಹಾಕಿ, ಪೋನ್ ನಂಬರು ಹಾಕಿ ರೂ. 1000 – 5000 ಹಣಕ್ಕೆ ಬರುತ್ತಾರೆ ಎಂದು ಅಪಮಾನ ಮಾಡಿದ್ದಾರೆ. ಅದರಂತೆ ನನಗೆ ತುಂಬಾ ಸಲ ಪೋನ್ ಸಹ ಬಂದಿತ್ತು. ನಾನು ತೀರಿಕೊಂಡಿದ್ದೇನೆ ಎಂದೂ ಸಹ ಪೋಟೋವನ್ನು ಹಾಕಿದ್ದರು. ಆಗ ನೆಂಟರು ನಾನು ಸತ್ತಿದ್ದೇನೆಂದು ಮನೆಯ ಬಳಿ ಬಂದಿದ್ದರು. ಅದನ್ನು ಸಹ ಪೋಲೀಸರಿಗೆ ತಿಳಿಸಿದಾಗ ಅವರು ದುೂರು ನಿರಾಕರಿಸಿದ್ದರು. ನನನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಕಷ್ಟವಾಗಿರುತ್ತದೆ. ನಾನು ಯಾವುದೇ ಕೆಲಸ ಮಾಡುವುದಿಲ್ಲ. ನನ್ನ ಗಂಡ ಮರದ ಕೆಲಸ ಮಾಡುತ್ತಾರೆ. ಅವರಿಗೆ ಸ್ವಂತ ಮನೆ, ತೆಂಗಿನ ತೋಟ ಸ. ನಂ. 32/2 ರಲ್ಲಿ 29 ಗುಂಟೆ ಜಮೀನು ಇದೆ. ಅವರಿಗೆ ವಾರ್ಷಿಕ ರೂ. 10 ಲಕ್ಷ ಆದಾಯ ಇದೆ. ಮರದ ಕೆಲಸದಿಂದ ತಿಂಗಳಿಗೆ ರೂ. 50 ಸಾವಿರ ದುಡಿಯುತ್ತಾರೆ. ಮದುವೆಯ ನಂತರ ನನ್ನ ತಾಯಿಯವರು ನನ್ನ ಗಂಡನ ಮನೆಗೆ ಒಂದು ಹಸುವನ್ನು ಸಹ ಕಳುಹಿಸಿದ್ದರು. ಅದು ಈಗಲೂ ಅವರ ಮನೆಯಲ್ಲಿಯೇ ಇದೆ. ಈ ಪ್ರಕರಣದ ದಾಖಲಿಸಿದ ನಂತರ ನನ್ನ ಗಂಡ ಮನೆಯ ಬಳಿ ಬಂದು ಗಲಾಟೆ ಮಾಡುತ್ತಿರಲಿಲ್ಲ. ಆದರೆ ಪೋನ್ ಮಾಡಿ ಬಾಯಿಗೆ ಬಂದಂತೆ ಬೈಯ್ಯುತ್ತಿದ್ದರು. ದಿಃ 30.10.2025 ರಂದು ನನ್ನ ಗಂಡ ಕುಡಿದು ನಮ್ಮ ಮನೆಯ ಕೊಟ್ಟಿಗೆಗೆ ಬಂದು ಅಲ್ಲೇ ಮಲಗಿದ್ದರು. ನಾಯಿ ಬೊಗಳಿದ್ದರಿಂದ ಹೋಗಿ ನೋಡಿ ಕೇಳಲಾಗಿ ಮಗುವನ್ನು ಕೊಡು ಎಂದು ಕೆಟ್ಟ ಭಾಷಯಲ್ಲಿ ಬೈದರು. ನಾನು

ಮಗುವನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತೇನೆ ಎಂದರೆ ನ್ಯಾಯಾಲಯ ಏನೂ ಮಾಡುವುದಿಲ್ಲ, ಹೊರಗೆ ಸಿಗು ಮಾಡುತ್ತೇನೆ ಎಂದು ಹೆದರಿಸಿದರು. ಅ ರೀತಿ ದೂರು ನೀಡಿದರೂ ಸಹ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ನನ್ನ ತಂದೆ ತಾಯಿಗೆ ಯಾರು ಗಂಡು ಮಕ್ಕಳಿಲ್ಲ. ಆದ್ದರಿಂದ ತಿಂಗಳಿಗೆ ರೂ. 20,000/- ಮತ್ತು ವಿದ್ಯಾಭ್ಯಾಸದ ಖರ್ಚು ಕೊಡಿಸಬೇಕಾಗಿ ವಿನಂತಿ. ನನಗೆ ಮತ್ತು ನನ್ನ ಮನೆಯವರಿಗೆ ಕೊಲೆ ಬೆದರಿಕೆ ಹಾಕಿದ್ದರಿಂದ ನಮಗೆ ರಕ್ಷಣೆ ನೀಡಬೇಕೆಂದು ವಿನಂತಿ.

ಸಾಕ್ಷಿಯು ಮದುವೆ ಆಮಂತ್ರಣ ಪತ್ರಿಕೆ, 3 ಪೋಟೋಗಳು, ಮದುವೆ ನೊಂದಣಿ ಪತ್ರವನ್ನು, ಸಿಡಿ, ವಾಟ್ಸಪ್ 6 ಹಾಳೆಯ ದಾಖಲೆಯನ್ನು, ಆರ್.ಟಿ.ಸಿ., ಸ್ವೀಕೃತಿ ಮತ್ತು ಸಿಡಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1** ರಿಂದ **ನಿಪಿ-15** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಎದುರುದಾರರ **ಪರ ವಕೀಲರಿಂದಃ**

(ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು, ಪಾಟೀಸವಾಲು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.